P.W.1

<u>ಸಾಕ್ಷಿಯನ್ನು ದಿನಾಂಕಃ **11-11-2021** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಮುಖ್ಯ ವಿಚಾರಣೆಃ ಶ್ರೀ ವಿ ಜಿ ಪಿ ವಕೀಲರವರಿಂದಃ</u>

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ. ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸದರಿ ಸಾಕ್ಷಿಯನ್ನು ಪಿ ಡಬ್ಲೂ **1** ಎಂದು ಪರಿಗಣಿಸಲಾಗಿದೆ.

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಜಮೀನ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತೇನೆ, ಸದರಿ ದಾಖಲೆಯ ಮೂಲ ಪ್ರತಿಯ ಬಗ್ಗೆ ಕೇಳಲಾಗಿ ಸಾಕ್ಷಿಯು ಮೂಲ ಪ್ರತಿಯು ಖರೀದಿದಾರನ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ನಿಪಿ 1 ಎಂದು, ಎಂ.ಆರ್.ನಂ. 17 ನ್ನು ನಿಪಿ 2 ಎಂದು, ಸರ್ವೆ ನಂ. 490/82 ನೇದ್ದರ ಪಹಣಿಯನ್ನು ನಿಪಿ 3 ಎಂದು, ಸರ್ವೆ ನಂ. 501/ಬಿ, ಸರ್ವೆ ನಂ. 494, ಸರ್ವೆ ನಂ. 490/ಎ2, ಸರ್ವೆ ನಂ. 490/ಬಿ1, ಸರ್ವೆ ನಂ. 436, ಸರ್ವೆ ನಂ. 358 ಎ, ಸರ್ವೆ ನಂ. 443/2, ಅವುಗಳನ್ನು ಅನುಕ್ರಮವಾಗಿ ನಿಪಿ4 ರಿಂದ 10 ಎಂದು, ವಂಶವೃಕ್ಷದ ದೃಢೀಕೃತ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು ನಿಪಿ 11 ಎಂದು, ಅದರೊಂದಿಗಿನ ಪ್ರಮಾಣ ಪತ್ರವನ್ನು ನಿಪಿ 11 ಎ ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**